ಅ) ಈ ಕೆರೆಗೆ ಬರುವ ನೀರು ಪರೀಕ್ಷಾ ವರದಿ ಪ್ರಕಾರ ಲವಣಾಂಶಗಳಿಂದ ಕೂಡಿದ್ದು ವ್ಯವಸಾಯ ಇಲಾಖೆಯವರು ಅದಕ್ಕನುಗುಣವಾಗಿ ನಿರ್ದಿಷ್ಟ ಬೆಳೆಗಳನ್ನು ಬೆಳೆಯಲು ಸಲಹೆ ಕೊಟ್ಟ ಮೇಲೆ ಇದಕ್ಕೆ ಅಚ್ಚುಕಟ್ಟುದಾರರು ಸಹಾ ಒಪ್ಪಿಗೆಯನ್ನು ಕೊಟ್ಟಿರುತ್ತಾರೆ ವಿವರವಾದ ಅಂದಾಜು ತಯಾರಿಸಲು ಕ್ರಮ ಕೈಗೊಳ್ಳಲಾಗಿದೆ.

ವಿಷ್ಣು ಸಮುದ್ರ ಕೆರೆಗೆ ಪೋಷಕ ಕಾಲುವೆಯ ನವೀಕರಣ ಕಾಮಗಾರಿಯ ಅಂದಾಜು ತಯಾರಾಗಿದ್ದು ಪರಿಶೀಲನೆಯಲ್ಲಿದೆ.

ಶಾಲೆಯಂ ಕೊಠಡಿಗಳ ನಿರ್ಮಾಣ ಕುರಿತು

೬೨೧. ಶ್ರೀ ಚಂದ್ರಶೇಖರ ಪಾವಂನಿ (ಪರಸಗಡ).—ಮಾನ್ಯ ಪ್ರಾಥಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸವದತ್ತಿ ನಗರದಲ್ಲಿ ಕನ್ನಡ ಪ್ರಾಥಮಿಕ ಶಾಲೆಯ ೩೮ ಕೊಠಡಿಗಳ ನಿರ್ಮಾಣ ಕೆಲಸವನ್ನು ಪ್ರಾರಂಭಿಸಲಾಗಿದೆಯೇ ?

ಆ) ಹಾಗಿಲ್ಲದಿದ್ದಲ್ಲಿ ಸದರಿ ಕೆಲಸವು ವಿಳಂಬವಾಗಲಿಕ್ಕೆ ಕಾರಣವೇನು ? ಹಾಗೂ ಕಾಮಗಾರಿಯನ್ನು ಕೂಡಲೇ ಕೈಗೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯಮಂತ್ರಿ).—

ಅ) ಪ್ರಾರಂಭಿಸಿರುವುದಿಲ್ಲ.

ಆ) ಈ ವಿಷಯವು ೧-೪-೮೭ರ ನಂತರ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುವುದರಿಂದ ಜಿಲ್ಲಾ ಪರಿಷತ್ತಿನಲ್ಲಿ ಮಂಡಿಸಿ ಕ್ರಮ ಕೈಗೊಳ್ಳಲು ಉಪ ನಿರ್ದೇಶಕರಿಗೆ ಸೂಚನೆ ನೀಡಿದೆ.

ಕರ್ನಾಟಕ ರಾಜ್ಯದಲ್ಲಿರುವ ವಿಶ್ವ ವಿದ್ಯಾನಿಲಯಂಗಳ ಬಗ್ಗೆ

೫೫೫. ಶ್ರೀ ಬಿ ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕದಲ್ಲಿರುವ ವಿಶ್ವವಿದ್ಯಾನಿಲಯಗಳ ಸಂಖ್ಯೆ ಎಷ್ಟು ?

ಆ) ಮತ್ತಷ್ಟು ವಿಶ್ವವಿದ್ಯಾನಿಲಯಗಳನ್ನು ತೆರೆಯುವ ಉದ್ದೇಶವೇನಾದರೂ ಸರ್ಕಾರದ ಗಮನದಲ್ಲಿದೆಯೆ ?

ಇ) ಆರ್ಥಿಕ ಹಿತದೃಷ್ಟಿಯಿಂದ ಈಗಿರುವ ವಿಶ್ವವಿದ್ಯಾನಿಲಯಗಳನ್ನು ಕಡಿಮೆ ಮಾಡಿ ಉಡಳಿತ ವರ್ಗವನ್ನು ವಿಂಗಡಿಸಿ ಮಾಡುವ ಆಲೋಚನೆ ಸರ್ಕಾರಕ್ಕಿದೆಯೆ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಒಟ್ಟು ೬ ವಿಶ್ವ ವಿದ್ಯಾನಿಲಯಗಳು ಅಸ್ತಿತ್ವದಲ್ಲಿವೆ.

ಆ) ಹೌದು, ಈ ಕೆಳಕಂಡ ಮೂರು ವಿಶ್ವವಿದ್ಯಾನಿಲಯಗಳನ್ನು ತೆರೆಯುವ ಉದ್ದೇಶವಿದೆ.

೧) ಕನ್ನಡ ಉನ್ನತ ಅಧ್ಯಯನ ಕೇಂದ್ರ

೨) ಮುಕ್ತ ವಿಶ್ವವಿದ್ಯಾನಿಲಯ

೩) ತಾಂತ್ರಿಕ ವಿಶ್ವ ವಿದ್ಯಾನಿಲಯ

ಇ) ಇಲ್ಲ. ವಿದ್ಯಾಭಿವೃದ್ಧಿಯ ದೃಷ್ಟಿಯಲ್ಲಿ ವಿಕೇಂದ್ರೀಕರಣವಾಗುವುದರಿಂದ ವಿಶ್ವ ವಿದ್ಯಾನಿಲಯಂಗಳನ್ನು ಕಡಿಮೆ ಮಾಡುವ ಆಲೋಚನೆ ಇಲ್ಲ.